ಅ) ಸದರಿ ಪ್ರೌಢಶಾಲೆಯಲ್ಲಿ ಕೊರತೆಯಿರುವ ವಿವಿಧ ಹುದ್ದೆಗಳೆಷ್ಟು ? ಹಾಗೂ ಯಾವ ವಿಷಯದ ಅಧ್ಯಾಪಕರ ಹುದ್ದೆಗಳ ಕೊರತೆಯಿದೆ ?

ಆ) ಅದನ್ನು ಎಂದು ನಿವಾರಿಸಲಾಗುವುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಈ ಕೆಳಕಂಡ ೧೩ ಹುದ್ದೆಗಳು ಮಂಜೂರಾಗಿವೆ.

		ಹುದ್ದೆಗಳು
೧. ಮುಖ್ಯೋಪಾಧ್ಯಾಯರು	...	೧
೨. ಪ್ರೌಢಶಾಲಾ ಸಹ ಶಿಕ್ಷಕರು	...	೫
೩. ಕನ್ನಡ ಭಾಷಾ ಶಿಕ್ಷಕರು	...	೧
೪. ಪದವೀಧರ ವ್ಯಾಯಾಮ ಶಿಕ್ಷಕ	...	೧
೫. ವೃತ್ತಿ ಶಿಕ್ಷಕರು	...	೨
೬. ಪ್ರಥಮ ದರ್ಜೆ ಗುಮಾಸ್ತರು	..	೧
೭. ಆರೈಕಾಲಿಕ ಹಿಂದಿ ಶಿಕ್ಷಕ	...	೧
೮. 'ಡಿ' ನೌಕರ	...	೧

ಆ) ವೃತ್ತಿ ಶಿಕ್ಷಕರ ಹುದ್ದೆಗಳು ೨

ಇ) ವಿಭಾಗೀಯ ಮಟ್ಟದ ನೇಮಕಾತಿ ಸಮಿತಿಯಿಂದ ಶಿಕ್ಷಕರ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ಮೇಲೆ ಭರ್ತಿ ಮಾಡಲಾಗುವುದು.

ಕುಂದಾಪುರ ಕ್ಷೇತ್ರದ ಸಿದ್ದಾಪುರ ಸರಕಾರಿ ಪ್ರೌಢಶಾಲೆಗೆ ಮಂಜೂರಾದ ಹುದ್ದೆಗಳ ಬಗ್ಗೆ

೧೦೧೬. ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಂದಾಪುರ ಕ್ಷೇತ್ರದ ಸಿದ್ದಾಪುರ ಸರ್ಕಾರಿ ಪ್ರೌಢಶಾಲೆಗೆ ಮಂಜೂರಾದ ವಿವಿಧ ಹುದ್ದೆಗಳೆಷ್ಟು ?

ಆ) ಕೊರತೆ ಇರುವ ವಿವಿಧ ಹುದ್ದೆಗಳೆಷ್ಟು ? ಯಾವ ವಿಷಯದ ಅಧ್ಯಾಪಕರ ಹುದ್ದೆಗಳು ಕೊರತೆ ಇದೆ ಹಾಗೂ ಅದನ್ನು ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಕೆಳಕಂಡ ೧೨ ಹುದ್ದೆಗಳು ಮಂಜೂರಾಗಿವೆ.

		ಹುದ್ದೆಗಳು
೧. ಮುಖ್ಯೋಪಾಧ್ಯಾಯರು	...	೧
೨. ಪ್ರೌಢಶಾಲಾ ಸಹಾಯಕ ಶಿಕ್ಷಕರು ಶ್ರೇಣಿ–೨	...	೫
೩. ವ್ಯಾಯಾಮ ಶಿಕ್ಷಕರು ಶ್ರೇಣಿ–೨	...	೧
೪. ಚಿತ್ರಕಲಾ ಶಿಕ್ಷಕರು	...	೧
೫. ದ್ವಿತೀಯ ದರ್ಜೆ ಸಹಾಯಕರು	...	೧
೬. ಅಟೆಂಡರ್	...	೧
೭. 'ಡಿ' ಗುಂಪಿನ ನೌಕರರು	...	೨

ಅ) ಒಂದು ಆಟೆಂಡರ್ ಹುದ್ದೆ, ಒಂದು ಮುಖ್ಯೋಪಾಧ್ಯಾಯರ ಹುದ್ದೆ ಖಾಲಿ ಇದೆ. ಮುಖ್ಯೋಪಾಧ್ಯಾಯರ ಹುದ್ದೆಯನ್ನು ಬಡ್ತಿ ಮೂಲಕ ತುಂಬಲು ಆದೇಶ ಹೊರಡಿಸಲಾಗಿದೆ. ಖಾಲಿ ಇರುವ ಆಟೆಂಡರ್ ಹುದ್ದೆಯನ್ನು ಬಡ್ತಿ ಮೂಲಕ ತುಂಬಲಾಗುವುದು.

ಕುಂದಾಪುರ ತಾಲ್ಲೂಕಿನಲ್ಲಿರುವ ಸಣ್ಣ ನೀರಾವರಿ ಯೋಜನೆಗಳ ಬಗ್ಗೆ

೧೦೫೮. ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಲೋಕೋಪಯೋಗಿ, ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಂದಾಪುರದಲ್ಲಿರುವ ಸಣ್ಣ ನೀರಾವರಿ ಯೋಜನೆಗಳೆಷ್ಟು ?
ಆ) ಆ ಪೈಕಿ, ದುರಸ್ತಿಯಾಗಬೇಕಾದ ಸಣ್ಣ ನೀರಾವರಿ ಕಾಮಗಾರಿಗಳೆಷ್ಟು ?
ಇ) ಅವುಗಳನ್ನು ಯಾವಾಗ ದುರಸ್ತಿಗೊಳಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೩೦೯.
ಆ) ೨೦೦
ಇ) ಹಣಕಾಸಿನ ಲಭ್ಯತೆಯನ್ನವಲಂಬಿಸಿ ದುರಸ್ತಿಗೊಳಿಸಲಾಗುವುದು, ಹಂತ ಹಂತವಾಗಿ, ಕ್ರಮ ಕೈಗೊಳ್ಳಲಾಗುವುದು.

ಕುಂದಾಪುರ ಕ್ಷೇತ್ರದ ಕೋಟೇಶ್ವರ ಸರ್ಕಾರಿ ಕಿರಿಯ ಕಾಲೇಜಿಗೆ ಮಂಜೂರಾದ ಹುದ್ದೆಗಳ ಬಗ್ಗೆ

೧೦೧೧. ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಂದಾಪುರ ಕ್ಷೇತ್ರದ ಕೋಟೇಶ್ವರ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಮಂಜೂರಾದ ವಿವಿಧ ದರ್ಜೆಯ ಹುದ್ದೆಗಳೆಷ್ಟು ?

ಆ) ಕೊರತೆ ಇರುವ ವಿವಿಧ ಹುದ್ದೆಗಳೆಷ್ಟು ? ಯಾವ ವಿಷಯದಲ್ಲಿ ಉಪನ್ಯಾಸಕರ ಹುದ್ದೆಗಳು ಇದೆ ಹಾಗೂ ಅವನ್ನು ಎಂದು ತುಂಬಲಾಗುವುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಕುಂದಾಪುರ ಕ್ಷೇತ್ರದ ಕೋಟೇಶ್ವರ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಈ ಕೆಳಕಂಡ ಬೋಧಕ ಹುದ್ದೆಗಳು ಮಂಜೂರಾಗಿರುತ್ತದೆ.

೧.	ಕನ್ನಡ	...	೧
೨.	ಆಂಗ್ಲ ಭಾಷೆ	...	೧
೩.	ಇತಿಹಾಸ	...	೧
೪.	ಅರ್ಥಶಾಸ್ತ್ರ	...	೧
೫.	ರಾಜ್ಯ ಶಾಸ್ತ್ರ	...	೧
೬.	ಸಮಾಜ ಶಾಸ್ತ್ರ	...	೧
೭.	ವಾಣಿಜ್ಯ ಶಾಸ್ತ್ರ	...	೧
೮.	ಭೌತ ಶಾಸ್ತ್ರ	...	೧
೯.	ರಸಾಯನ ಶಾಸ್ತ್ರ	.	೧
೧೦.	ಗಣಿತ ಶಾಸ್ತ್ರ	...	೧
೧೧.	ಜೀವಶಾಸ್ತ್ರ	...	೧
		... ಒಟ್ಟಿಗೆ	೧೧